2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **105/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಮಂಜುನಾಥ್ | | ಪಿಡಬ್ಲ್ಯೂ - 2 |
| ತಂದೆಯ ಹೆಸರು | - ರಂಗಶೆಟ್ಟಿ | | ಸಿಡಬ್ಲ್ಯೂ - 2 |
| ವಯಸ್ಸು | - 23 ವರ್ಷ | | |
| ಉದ್ಯೋಗ | - - | | |
| ವಾಸ ಸ್ಥಳ | - ಬುಕ್ಕಂಬೂದಿ | | |

ದಿನಾಂಕಃ 13-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. ನ್ಯಾಯಾಲಯದಲ್ಲಿ ಹಾಜರಿರುವ 2 ನೇ ಆರೋಪಿ ಗೊತ್ತು ಆಕೆ ನಮ್ಮ ಊರಿನಲ್ಲಿರುವ ಅಂಗನವಾಡಿಯಲ್ಲಿ ಶಿಕ್ಷಕಿಯಾಗಿದ್ದಳು. ಉಳಿದ ಆರೋಪಿತರನ್ನು ನೋಡಿದ್ದೇನೆ ಆದರೆ ಅಷ್ಟಾಗಿ ಪರಿಚಯವಿಲ್ಲ. ಮೃತೆ ಲತಾ ಗೊತ್ತಿಲ್ಲ. ಆಕೆ ಮತ್ತು 1 ನೇ ಆರೋಪಿಯ ಸಂಬಂಧ ನನಗೆ ಗೊತ್ತಿಲ್ಲ. ಆಕೆ ಈಗ್ಗೆ 3 ರಿಂದ 4 ವರ್ಷಗಳ ಹಿಂದೆ ನಮ್ಮ ಊರಾದ ಬುಕ್ಕಂಬೂದಿಯಲ್ಲಿರುವ 1 ನೇ ಆರೋಪಿಯ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆದರೆ ಆಕೆ ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಮೃತಳ ತಂದೆ ಗಿರೀಶ್ ರವರು ಆರೋಪಿತರ ವಿರುದ್ಧ ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ಲತಾ ಮೃತಪಟ್ಟಿದ್ದ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ

ಯಾವುದೇ ಹೇಳಿಕೆಯನ್ನು ನೀಡಿಲ್ಲ. ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕಃ 21.04.2019 ರಂದು ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಮಹಜರ್ ಜರುಗಿಸಲು ಪಂಚರಾಗಿ ಸಹಕರಿಸುವಂತೆ ಪೊಲೀಸರು ನೀಡಿದ್ದ ನೋಟೀಸಾಗಿದ್ದು ಅದನ್ನು ನಿಪಿ.29 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು. ಪೊಲೀಸರು ಪಂಚನಾಮೆಗೆ ಸಹಕರಿಸುವಂತೆ ನನಗೆ ಯಾವುದೇ ನೋಟೀಸನ್ನು ನೀಡಿಲ್ಲ. ಆದರೆ ಪೊಲೀಸರು ಹೇಳಿದ ಮೇರೆಗೆ ಸದರಿ ಸಹಿಯನ್ನು ಅಜ್ಜಂಪುರ ಬಸ್ ನಿಲ್ದಾಣದಲ್ಲಿ ಮಾಡಿದ್ದೇನೆ. ಸಾಕ್ಷಿಯು ನಿಪಿ.23 ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.23(ಸಿ) ಮತ್ತು 23(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸಹ ಲತಾ ಮೃತ ಪಟ್ಟ ಎರಡು ದಿನಗಳ ಬಳಿಕ ಅಜ್ಜಂಪುರ ಬಸ್ ನಿಲ್ದಾಣದಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನು ಅಮಾನತುಪಡಿಸಿಕೊಂಡಿಲ್ಲ. ನಿಪಿ.23 ಮತ್ತು 29 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ.24 ಫೋಟೋದಲ್ಲಿ ಆತನ ಇರುವಿಕೆಯನ್ನು ನೋಡಿ

ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ಎಲ್ಲಿ ಯಾವಾಗ ತೆಗೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋದಲ್ಲಿರುವ ಮೊಬೈಲ್ ಯಾರಿಗೆ ಸೇರಿದ್ದು ಮತ್ತು ಅದನ್ನು ಯಾರು ಹಾಜರುಪಡಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೆಲ್ಲಾ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುವ ಮೊಬೈಲ್ ನ ಮೇಲೆ ಅಂಟಿಸಲಾಗಿರುವ ಚೀಟಿಯ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿ ಅದು ನನ್ನದೇ ಸಹಿ ಆದರೆ ನಾನು ಅದನ್ನು ಖಾಲಿ ಹಾಳೆಯ ಮೇಲೆ ಮಾಡಿದ್ದೇನೆ ಆದರೆ ಯಾವುದೇ ಮೊಬೈಲ್ ಮೇಲೆ ಅಂಟಿಸಿದ್ದ ಚೀಟಿಯ ಮೇಲೆ ನಾನು ಸಹಿ ಮಾಡಿಲ್ಲ ಎಂದು ನುಡಿದಿರುತ್ತಾರೆ. ನಿಪಿ.25 ರಂತೆ ಗುರುತಿಸಲಾಗಿರುವ ಡ್ರಾಯಿಂಗ್ ಬುಕ್ ನ್ನು ತೋರಿಸಲಾಗಿ ಸಾಕ್ಷಿಯು ಆ ರೀತಿ ಯಾವುದೇ ಬುಕ್ ನ್ನು ಪೊಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

2. ದಿನಾಂಕಃ 21.04.2019 ರಂದು ಪೊಲೀಸರು ಈ ಪ್ರಕರಣದ ಸಲುವಾಗಿ ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ

ಹೇಳಿಕೆಯಲ್ಲಿ ಮೃತೆ ಲತಾ ನನ್ನ ಜೊತೆಯಲ್ಲಿ ಬುಕ್ಕಂಬೂದಿಯಲ್ಲಿರುವ ಶ್ರೀ ತಿಪ್ಪೇಸ್ವಾಮಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿಯನ್ನು ಓದಿದ್ದಾಗಿ ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ನಾವು ಬೇರೆ ಬೇರೆ ಡಿಪಾರ್ಟ್ ಮೆಂಟ್ ನಲ್ಲಿ ಓದಿದ್ದಾಗಿ ಪೊಲೀಸರಿಗೆ ತಿಳಿಸಿದ್ದೇನೆ ಎನ್ನುತ್ತಾರೆ. ಮೃತೆ ಲತಾರವರು ಪಿಯುಸಿ ಮುಗಿಸಿದ ನಂತರ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಬಿ.ಕಾಂ ಓದುತ್ತಿದ್ದಾಗಿ ಮತ್ತು 2 ನೇ ಆರೋಪಿಯು ಮೃತಳ ಹತ್ತಿರದ ಸೋದರ ಸಂಬಂಧಿಯಾಗಿದ್ದು ಆಕೆಯ ಮಗನಾದ 1 ನೇ ಆರೋಪಿ ಪಿಯುಸಿಯಲ್ಲಿ ಫೇಲ್ ಆಗಿ ಕೋರಿಯರ್ ವಾಹನದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾಗಿ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸರಿಯಲ್ಲ.

3. ನೀವು ಪಿಯುಸಿ ಓದುವಾಗ ಮೃತೆ ಲತಾರವರು 1 ನೇ ಆರೋಪಿಯನ್ನು ಪ್ರೀತಿ ಮಾಡುತ್ತಿದ್ದಾಗಿ ನಿಮ್ಮ ಬಳಿ ಹೇಳಿಕೊಂಡಿದ್ದಳು ಎಂದರೆ ಸರಿಯಲ್ಲ. ಘಟನೆಯ 4 ರಿಂದ 5 ತಿಂಗಳ ಹಿಂದೆ ಕಲ್ಲತ್ತಗಿರಿಯಲ್ಲಿ ಕುಟುಂಬಸ್ಥರ ಸಮಕ್ಷಮ ಲತಾ 1 ನೇ ಆರೋಪಿಯನ್ನು ಮದುವೆಯಾಗಿದ್ದಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ಸ್ವಲ್ಪ ದಿನಗಳ ಕಾಲ ಗಂಡ ಹೆಂಡತಿ, ಅತ್ತೆ ಮಾವ ಎಲ್ಲರೂ ಅನ್ಯೂನ್ಯವಾಗಿದ್ದರು ಆದರೆ ಘಟನೆಯ ಸ್ವಲ್ಪ ದಿನಗಳ ಹಿಂದೆ ಸಂಸಾರದಲ್ಲಿ ಒಡಕು ಮೂಡಿ ಗಲಾಟೆಗಳಾಗುತ್ತಿದ್ದವು ಮತ್ತು ಆ

ಬಗ್ಗೆ 2 ನೇ ಆರೋಪಿ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದ ವಿಚಾರ ನನಗೆ ತಿಳಿದಿತ್ತು ಎಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಆನಂತರ 1 ನೇ ಆರೋಪಿಯ ತಂದೆ ತಾಯಿಯರಾದ 2 ಮತ್ತು 3 ನೇ ಆರೋಪಿತರು ಶಿವನಿಯಲ್ಲಿ ಪ್ರತ್ಯೇಕ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದಾಗಿ ಮತ್ತು ನಮ್ಮ ಊರಿನಲ್ಲಿರುವ ಅವರ ಮನೆಯಲ್ಲಿ 1 ನೇ ಆರೋಪಿ ಮತ್ತು ಮೃತೆ ಲತಾಳು ವಾಸವಾಗಿದ್ದಾಗಿ ಮತ್ತು 1 ನೇ ಆರೋಪಿ ಕೋರಿಯರ್ ವಾಹನದಲ್ಲಿ ಚಾಲಕನಾಗಿ ಕೆಲಸ ಮಾಡಿಕೊಂಡು ವಾರಕ್ಕೊಮ್ಮೆ ಮನೆಗೆ ಬಂದು ಹೋಗುತ್ತಿದ್ದಾಗಿ ಪೊಲೀಸರಿಗೆ ನೀಡಿದ್ದ ಹೇಳಿಕೆಯಲ್ಲಿ ತಿಳಿಸಿದ್ದೆನು ಎಂದರೆ ಸರಿಯಲ್ಲ.

4. ದಿನಾಂಕಃ 19.04.2019 ರ ಶುಕ್ರವಾರದಂದು 1 ನೇ ಆರೋಪಿ ನಮ್ಮ ಊರಿಗೆ ಬಂದಿದ್ದಾಗಿ ಮತ್ತು ಅವನನ್ನು ನೋಡಿ ಆತನನ್ನು ಮಾತನಾಡಿಸಿಕೊಂಡು ನಾನು ಕಾಲೇಜಿಗೆ ಹೋಗಿದ್ದಾಗಿ ಪೊಲೀಸರಿಗೆ ನೀಡಿದ್ದ ಹೇಳಿಕೆಯಲ್ಲಿ ತಿಳಿಸಿದ್ದೆನು ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 9.00 ಗಂಟೆಗೆ 1 ನೇ ಆರೋಪಿ ಕುಡಿದು ಬಂದು ನಮ್ಮ ಮನೆಯ ಮುಂದೆ ನನ್ನ ಜೊತೆ ಕುಳಿತುಕೊಂಡು ಬೀಡಿ ಸೇದಿದ್ದಾಗಿ ನಂತರ ಆತನ ಹೆಂಡತಿ ಲತಾಳನ್ನು ಊಟಕ್ಕೆ ಏನು ಮಾಡಿದ್ದೀಯಾ ಎಂದು ಕೇಳಿದಾಗ ಆಕೆ ಬಸ್ಸಾರು ಮಾಡಿರುವುದಾಗಿ ಹೇಳಿದ್ದಾಗಿ ನಂತರ 1 ನೇ ಆರೋಪಿ ಊಟಕ್ಕೆ ಹೋಗಿದ್ದಾಗಿ ಪೊಲೀಸರಿಗೆ ನೀಡಿದ್ದ

ಹೇಳಿಕೆಯಲ್ಲಿ ತಿಳಿಸಿದ್ದೆನು ಎಂದರೆ ಸರಿಯಲ್ಲ.

5. ದಿನಾಂಕಃ 20.04.2019 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ಎಂದಿನಂತೆ ನನ್ನ ಸ್ನೇಹಿತ ರಾಹುಲ್ ಜೊತೆ ಬೈಕಿನಲ್ಲಿ ಹಣ್ಣೆ ಸಮೀಪ ಹೋಗುತ್ತಿದ್ದಾಗ ನನ್ನ ಅಕ್ಕ ಭಾಗ್ಯ ಲತಾರವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮೆಸೇಜ್ ಮಾಡಿದ್ದಾಗಿ  ನಂತರ ನಾನು ಮಧ್ಯಾಹ್ನ 12.30 ಗಂಟೆಗೆ ಲತಾ ರವರ ಮನೆಯ ಮುಂದೆ ಜನ ಸೇರಿರುವುದನ್ನು ನೋಡಿ ಆಕೆ ಮೃತಪಟ್ಟಿರುವುದು ಗೊತ್ತಾಯಿತು ಎಂದು ಪೊಲೀಸರಿಗೆ ನೀಡಿದ್ದ ಹೇಳಿಕೆಯಲ್ಲಿ ತಿಳಿಸಿದ್ದೆನು ಎಂದರೆ ಸರಿಯಲ್ಲ.  ನಂತರ ಲತಾ ಆಕೆ ಮಲಗುವ ಕೋಣೆಯಲ್ಲಿ ವೇಲಿನಿಂದ ಮೇಲ್ಛಾವಣಿಗೆ ಹಾಕಿರುವ ಅಡಿಕೆ ಬೊಂಬಿಗೆ ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ಗೊತ್ತಾಯಿತು ಪೊಲೀಸರಿಗೆ ನೀಡಿದ್ದ ಹೇಳಿಕೆಯಲ್ಲಿ ತಿಳಿಸಿದ್ದೆನು ಎಂದರೆ ಸರಿ.

6.  ಲತಾ ಮತ್ತು 1 ನೇ ಆರೋಪಿಯ ಮಧ್ಯೆ ಏನು ಗಲಾಟೆ ನಡೆದಿರಬಹುದು ಮತ್ತು ಅತ್ತೆ ಮಾವ  ಮತ್ತು ಆಕೆಯ ನಡುವೆ ಏನೋ ಮನಸ್ತಾಪ ಆಗಿದ್ದರಿಂದ ಅವರ ಹಿಂಸೆಯನ್ನು ತಾಳಲಾರದೇ ಆಕೆ ನೇಣು ಹಾಕಿಕೊಂಡು ಮೃತಪಟ್ಟಿರಬಹುದು ಇಲ್ಲ 1 ನೇ ಆರೋಪಿ ಮತ್ತು ಲತಾಳ ನಡುವೆ ರಾತ್ರಿ ಗಲಾಟೆ ಮಾಡಿಕೊಂಡು ಅವರಿಬ್ಬರ ಮಧ್ಯೆ ಏನೋ ಅಚಾತುರ್ಯ ಆಗಿರಬಹುದು ಎಂದು ಪೊಲೀಸರಿಗೆ ನೀಡಿದ್ದ ಹೇಳಿಕೆಯಲ್ಲಿ ತಿಳಿಸಿದ್ದೆನು ಎಂದರೆ ಸರಿಯಲ್ಲ.

7. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.30 ಎಂದು ಗುರುತಿಸಲಾಯಿತು.

8. ದಿನಾಂಕಃ 21.04.2019 ರಂದು ಬುಕ್ಕಂಬೂದಿಯ ಸಿದ್ದಲಿಂಗೇಶ್ವರ ಕಾಲೋನಿಯ 3 ನೇ ಆರೋಪಿಯ ಮನೆಯಲ್ಲಿ ಪಂಚನಾಮೆಯನ್ನು ಜರುಗಿಸಲು ಪಂಚರಾಗಿ ಹಾಜರಿರುವಂತೆ ನಿಪಿ.29 ರಂತೆ ನನಗೆ ಪೊಲೀಸರು ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಅದರ ಮೇರೆಗೆ ನಾನು ಬೆಳಿಗ್ಗೆ 11.30 ಗಂಟೆಗೆ ಸದರಿ 3 ನೇ ಆರೋಪಿಯ ಮನೆಗೆ ಹೋದೆನು ಎಂದರೆ ಸರಿಯಲ್ಲ. ಆಗ ಸದರಿ ಮನೆಯ ಲತಾಳು ಮಲಗುವ ಕೋಣೆಯಲ್ಲಿ ಹಾಜರಿದ್ದ ಮೃತಳ ತಂದೆಯಾದ ಚಾಸಾ.1 ಗಿರೀಶ್ ರವರು ಸದರಿ ಸ್ಥಳದಲ್ಲಿ ಆತನ ಮಗಳಾದ ಲತಾ ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ತಿಳಿಸಿದ ಮೇರೆಗೆ ಪೊಲೀಸರು ನನ್ನ ಸಮಕ್ಷಮ ಮತ್ತು ಸಹ ಪಂಚರಾದ ಚಾಸಾ. 3 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 1.30 ರವರೆಗೆ ನಿಪಿ.23 ರಂತೆ ಪಂಚನಾಮೆಯನ್ನು ಜರುಗಿಸಿ ಸ್ಥಳದಲ್ಲಿಯೇ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾವೆಯ ಕಾಲಕ್ಕೆ ಸದರಿ ಕೋಣೆಯ ಕಡಪ ಕಲ್ಲಿನ ಮಂಚದ ಮೇಲೆ ಇದ್ದ ಒಂದು ಪುಸ್ತಕ ಮತ್ತು ಒಂದು ಮೊಬೈಲ್ ನ್ನು ಪಿರ್ಯಾದಿ ಹಾಜರುಪಡಿಸಿದ್ದು ಸದರಿ ಪುಸ್ತಕ ಡ್ರಾಯಿಂಗ್ ಪುಸ್ತಕವಾಗಿದ್ದು ಅದರ ಮೇಲೆ Ben 10 ಡ್ರಾಯಿಂಗ್ ಬುಕ್ ಎಂದು ಪ್ರಿಂಟ್ ಹಾಕಲಾಗಿದ್ದು ಮೊದಲನೇ

ಪುಟದಲ್ಲಿ Hip hip hurray ಎಂದು ಪ್ರಿಂಟ್ ಹಾಕಲಾಗಿದ್ದು, ಸದರಿ ಪುಸ್ತಕದಲ್ಲಿ ಒಟ್ಟು16 ಪುಟಗಳು ಇದ್ದು,16 ನೇ ಪುಟದಲ್ಲಿ " Dharmu I am really sorry, ನಾನಗೆ ಅಂತ ಯಾರು ಇಲ್ಲ ಅದಕ್ಕೆ ನಾನು ಆತ್ಮ ಆತ್ಯೆ ಮಾಡಿಕೊಳ್ಳತ ಇದೆನೆ ನಾನ್ನ ಸಾವಿವೆ ನಾನ್ನೆ ಕಾರಣ ಇಂತಿ ಲತಾ ಧರ್ಮರಾಜ್ (Latha)'' ಎಂದು ಬರೆದಿದ್ದ ಪುಸ್ತಕವನ್ನು ಮತ್ತು ಮೊಬೈಲ್ ಐಟೆಲ್ ಕಂಪೆನಿಯ Key Pad ಮೊಬೈಲ್ ನ್ನುಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್ ಗೆ ಹಾಕಿ ಬಿಳಿಯ ಬಟ್ಟೆಯ ಚೀಲದಲ್ಲಿ ಇಟ್ಟು ಹೊಲೆದು 'ಪಿ' ಎಂಬ ಅಕ್ಷರದಿಂದ ಸೀಲು ಮಾಡಿ ಅದರ ಮೇಲೆ ನನ್ನ ಸಹಿಯನ್ನು ಪಡೆದು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

9. ಆ ದಿನ ಪೊಲೀಸರು ನನ್ನ ಸಮಕ್ಷಮ ನಿಪಿ.25 ಡ್ರಾಯಿಂಗ್ ಬುಕ್ ಮತ್ತು ಮು.ಮಾ.1 ಮೊಬೈಲ್ ನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.29 ರಂತೆ ನೋಟೀಸನ್ನು ಪಡೆದು ನಿಪಿ.23 ರಂತೆ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಹಾಜರಿದ್ದು ಅದರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

10. ಘಟನೆ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನೀವು ನಿಪಿ.30 ರಂತೆ ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದು ಪೊಲೀಸರು ನನ್ನ ಸಮಕ್ಷಮ ನಿಪಿ.23 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿ ನಿಪಿ.25 ಮತ್ತು ಮು.ಮಾ.1 ನ್ನು

ಅಮಾನತುಪಡಿಸಿಕೊಂಡಿದ್ದರೂ ಸಹ ಆರೋಪಿತರು ನಿಮ್ಮ ಪಕ್ಕದ ಮನೆಯರಾಗಿರುವ ಕಾರಣ ಅವರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದಃ</u>

11. ಲತಾ ನೇಣು ಹಾಕಿಕೊಂಡು ಮೃತ ಪಟ್ಟಿದ್ದಾಳೆ ಎನ್ನುವ ಸಮಯದಲ್ಲಿ ಆರೋಪಿತರು ಶಿವನಿಯಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ.25 ಮತ್ತು ಮು.ಮಾ.1 ನ್ನು ಪೊಲೀಸರು ನನಗೆ ತೋರಿಸಿಲ್ಲ ಮತ್ತು ಅವುಗಳನ್ನು ಪೊಲೀಸರು ತೆಗೆದುಕೊಂಡಿದ್ದನ್ನು ನಾನು ನೋಡಿಲ್ಲ. ಮೃತಳು ಯಾರನ್ನು ಯಾವಾಗ ಮದುವೆಯಾಗಿದ್ದಳು ಎಂದು ನನಗೆ ಗೊತ್ತಿಲ್ಲ. ನಾನು ಗ್ರಾಮದ ಮುಖಂಡನಲ್ಲ ಮತ್ತು ನಾನು ನಮ್ಮ ಗ್ರಾಮದಲ್ಲಿ ಯಾವುದೇ ಗೌರವಾನ್ವಿತ ಹುದ್ದೆಯನ್ನು ಹೊಂದಿಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ